ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 40 ಚಾಸಾ- 50**

ಸಾಕ್ಷಿದಾರರ ಹೆಸರುಃ : ಪಿ ಆರ್ ಜಯರಾಮು

ತಂದೆಯ ಹೆಸರುಃ : ಪಿ ಬಿ ರಂಗಪ್ಪ

ವಯಸ್ಸುಃ : 73 ವರ್ಷ

ಉದ್ಯೋಗಃ : ನಿವೃತ್ತ ಉಪನಿರ್ದೇಶಕರು

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-09-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 29-9-1984ರಿಂದ 12-1-2012ರವರೆಗೆ ನಾನು ಬೆಂಗಳೂರಿನ ನ್ಯಾಯವಿಜ್ಞಾನ ಪ್ರಯೋಗಾಲಯದಲ್ಲಿ ಸಹಾಯಕ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 13-11-2009ರಂದು ಸಕಲೇಶಪುರ ಟೌನ್ ಪೊಲೀಸ್ ಠಾಣೆಯ ಮೊ.ಸಂ.196/2009ಕ್ಕೆ ಸಂಬಂಧಿಸಿದಂತೆ ರಾಸಾಯನಿಕ ವಿಶ್ಲೇಷಣೆಗಾಗಿ 4 ಸೀಲುಮಾಡಿದ ವಸ್ತುಗಳನ್ನು ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದರು. ಅದರ ಜೊತೆ ಮಾದರಿ ಸೀಲನ್ನು ಕಳುಹಿಸಿದ್ದರು. ಅದನ್ನು ಪರಿಶೀಲನೆ ಮಾಡಿದಾಗ ಮಾದರಿ ಸೀಲು ಮತ್ತು ವಸ್ತುಗಳ ಮೇಲಿದ್ದ ಸೀಲುಗಳು ಹೋಲಿಕೆಯಾಗಿದ್ದು ಸೀಲುಗಳು ಸುಸ್ಥಿತಿಯಲ್ಲಿದ್ದವು. ಅವುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ನಾನು ತೆರೆದು ನೋಡಿದಾಗ ವಸ್ತುಸಂಖ್ಯೆ 1 ರಿಂದ 4 ರಲ್ಲಿ buprinorphin

hydrochloride ಎಂಬ ಇಂಜೆಕ್ಷನ್ ಇತ್ತು. ಅದನ್ನು ವಿವಿಧ ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿರುವ ದ್ರವವು buprinorphin ವಸ್ತುವಾಗಿದ್ದು ಪ್ರತಿಯೊಂದರಲ್ಲೂ 2 ಎಂಎಲ್ ಇತ್ತು. ಈ ಎಲ್ಲಾ ವಿಚಾರವನ್ನು ನನ್ನ ವರದಿಯಲ್ಲಿ ನಮೂದಿಸಿ ವರದಿಯನ್ನು ನಿಪಿ-83 ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-83(ಎ) ಎಂದು ಗುರುತಿಸಲಾಯಿತು. ಪರೀಕ್ಷೆ ಮುಗಿದ ನಂತರ ಆ ನಾಲ್ಕೂ ವಸ್ತುಗಳನ್ನು ಮತ್ತೆ ಪ್ಯಾಕು ಮಾಡಿದ ಸೀಲು ಮಾಡಿದ ಮಾದರಿ ಸೀಲಿನೊಂದಿಗೆ ದಿನಾಂಕ 11-3-2010ರಂದು ವರದಿ ಮತ್ತು ವಸ್ತುವಿನೊಂದಿಗೆ ಹಿಂದಿರುಗಿಸಿದೆನು. ಆ ಮಾದರಿ ಸೀಲನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-83(1) ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-83(1ಎ) ಎಂದು ಗುರುತಿಸಲಾಯಿತು. ಪ್ರತಿಯೊಂದು ಇಂಜೆಕ್ಷನ್ ನಲ್ಲೂ 3 ಮಿಲಿಗ್ರಾಂ ಮತ್ತು (ಮಾದಕತೆ) ಬರಿಸುವ ಅಂಶ ಇತ್ತು. Bupregesic ಎನ್ನುವುದು ಬ್ರ್ಯಾಂಡ್ ಹೆಸರು ಆಗಿರುತ್ತದೆ. buprinorphin ಎನ್ನುವುದು ಮಾದಕತೆ ಬರಿಸುವ ರಾಸಾಯನಿಕ ವಸ್ತುವಾಗಿರುತ್ತದೆ. ನನಗೆ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಸದರಿ ವಸ್ತುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**